**ದಿನಾಂಕ 24.05.2012 ರಂದು ಮಧ್ಯಾಹ್ನ 12.00 ಗಂಟೆಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ 406, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರಿನಲ್ಲಿ ನಡೆದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿನ 13ನೇ ಆಡಳಿತ ಮಂಡಳಿ ಸಭೆಯ ಸಭಾ ನಡುವಳಿಗಳು.**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

| | | |
|---|---|---|
| 1. ಶ್ರೀ ರಾಮದಾಸ್<br>ವೈದ್ಯಕೀಯ ಶಿಕ್ಷಣ ಸಚಿವರು,<br>ಕರ್ನಾಟಕ ಸರ್ಕಾರ, ಬೆಂಗಳೂರು. | – | ಅಧ್ಯಕ್ಷರು |
| 2. ಶ್ರೀ ಕೆ.ಹೆಚ್. ಗೋಪಾಲಕೃಷ್ಣ ಗೌಡ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),<br>ಬೆಂಗಳೂರು. | – | ಉಪಾಧ್ಯಕ್ಷರು |
| 3. ಶ್ರೀ ವಿ. ರಮಣರೆಡ್ಡಿ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),<br>ಬೆಂಗಳೂರು. | – | ಸದಸ್ಯರು |
| 4. ಶ್ರೀ, ಡಿ.ಇ. ಬಸವರಾಜಪ್ಪ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ,<br>ಬೆಂಗಳೂರು | – | ಸದಸ್ಯರು |
| 5. ಶ್ರೀ ಅಶೋಕ್ ಜೀವರಗಿ,<br>ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಬೆಂಗಳೂರು | – | ಸದಸ್ಯರು |
| 6. ಶ್ರೀಮತಿ ವಿದ್ಯಾಕುಮಾರಿ<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),<br>ಬೆಂಗಳೂರು | - | ಸದಸ್ಯರು |
| 7. ಡಾ. .ಜಿ.ಎಸ್. ವೆಂಕಟೇಶ್<br>ನಿರ್ದೇಶಕರು ವೈದ್ಯಕೀಯ ಶಿಕ್ಷಣ, ಬೆಂಗಳೂರು. | – | ಸದಸ್ಯರು. |

8. ಡಾ. ಕರೂರು. ಬಿ.ವಿ, – ಸದಸ್ಯರು
ಆಯುಕ್ತರು, (ಪರವಾಗಿ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಬೆಂಗಳೂರು

9. ಡಾ. ಶಿವಾನಂದ್ ದೊಡ್ಡಮನಿ, – ಸದಸ್ಯರು
ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಭೋಧಕ ಆಸ್ಪತ್ರೆ, ರಾಯಚೂರು.

10. ಶ್ರೀ ನಾಗೇಶ್, – ಸದಸ್ಯರು
ಪ್ರಭಾರಿ ಮುಖ್ಯ ಆಡಳಿತಾಧಿಕಾರಿಗಳು, ರಿಮ್ಸ್, ರಾಯಚೂರು

11. ಶ್ರೀ ವೆಂಕಟೇಶ್, – ಸದಸ್ಯರು
ಆರ್ಥಿಕ ಸಲಹೆಗಾರರು, ರಿಮ್ಸ್, ರಾಯಚೂರು

12. ಡಾ. ರಾಮಯ್ಯ – ಸದಸ್ಯ ಕಾರ್ಯದರ್ಶಿ
ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ, ಅಧ್ಯಕ್ಷರಾದ ಸನ್ಮಾನ್ಯ ಶ್ರೀ ರಾಮದಾಸ್‌ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

<u>ಆಡಳಿತ ಮಂಡಳಿ ಸಭೆಯ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.</u>

**ವಿಷಯ ಸೂಚಿ ಸಂಖ್ಯೆ. 1 : ದಿನಾಂಕ 03.01.2011ರಂದು ಜರುಗಿದ ರಿಮ್ಸ್ ಸಂಸ್ಥೆಯ 11ನೇ ಆಡಳಿತ ಮಂಡಳಿ ಸಭಾ ನಡುವಳಿಗಳನ್ನು ಅನುಮೋದಿಸುವ ಬಗ್ಗೆ.**

ದಿನಾಂಕ 03.01.2011ರಂದು ಜರುಗಿದ ರಿಮ್ಸ್ ಸಂಸ್ಥೆಯ 11ನೇ ಆಡಳಿತ ಮಂಡಳಿ ಸಭೆಯ ಸಭಾ ನಡುವಳಿಗಳನ್ನು ಓದಿ ದಾಖಲಿಸಿ ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 2 : ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿಗೆ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ.**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ನಿರ್ದೇಶಕರ ಹುದ್ದೆಗೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರ ಪತ್ರಿಕಾ ಪ್ರಕಟಣೆ ಸಂಖ್ಯೆ ವೈಶಿನಿ /ಎಂಆರ್‌ಓ / 1 / 23 /2011-12 ದಿನಾಂಕ 09.09.2011 & 06.02.2012ರ ಪ್ರಕಾರ ಪತ್ರಿಕಾ ಪ್ರಕಟಣೆ ಮಾಡಲಾಗಿದ್ದು, ಹಾಗು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ಒಟ್ಟು 33 ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿರುವ ಕುರಿತು, ಸಭೆಯಲ್ಲಿ ನಿರ್ದೇಶಕರ ನೇಮಕಾತಿಯ ಕುರಿತು ಕೂಲಂಕುಶವಾಗಿ ಪರಿಶೀಲಿಸಿ ಅನುಮೋದಿಸಲಾಯಿತು. ವಿಧಾನ ಪರಿಷತ್ತಿನ ಚುನಾವಣೆ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಚುನಾವಣೆಯ ನೀತಿ ಸಂಹಿತೆ ಅವಧಿ ಮುಗಿದ ನಂತರ ನಿರ್ದೇಶಕರ ಹುದ್ದೆಯ ಅಭ್ಯರ್ಥಿಯ ಹೆಸರನ್ನು ಸರ್ಕಾರದ ಆದೇಶದ ಮೂಲಕ ಹೊರಡಿಸಲು ಸಭೆಯು ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ. 3 : ರಿಮ್ಸ್ ಸಂಸ್ಥೆಯ ಅವರಣದಲ್ಲಿ ನೂತನವಾಗಿ ನಿರ್ಮಾಣವಾಗಿರುವ 520 ಹಾಸಿಗೆಗಳ ಬೋಧಕ ಆಸ್ಪತ್ರೆಯಲ್ಲಿ ಜನರಿಕ್ ಡ್ರಗ್ ಮಳಿಗೆ ಹಾಗು ಆಹಾರ ಮಳಿಗೆಗಳನ್ನು (ಫುಡ್‌ಕೋರ್ಟ್) ತೆರೆಯಲು ಅನುಮತಿ ನೀಡುವ ಕುರಿತು.**

ರಿಮ್ಸ್ ಅವರಣದಲ್ಲಿ ನೂತನವಾಗಿ ನಿರ್ಮಾಣವಾಗಿರುವ 520 ಹಾಸಿಗೆಗಳ ಬೋಧಕ ಆಸ್ಪತ್ರೆಯಲ್ಲಿ ಜನರಿಕ್ ಡ್ರಗ್ಸ್ ಹಾಗು ಆಹಾರ ಮಳಿಗೆಗಳನ್ನು ಸರ್ಕಾರಿ ಆದೇಶ ಸಂಖ್ಯೆ. ಆಕುಕ / 477 / ಎಂಎಸ್‌ಎಫ್ / 2011 ದಿನಾಂಕ 20.12.2011ರನ್ವಯ ತಾತ್ಕಲಿಕವಾಗಿ ರಿಮ್ಸ್ ಹಳೆಯ ಬೋಧಕ ಆಸ್ಪತ್ರೆಯ ಎದೆ ಮತ್ತು ಕ್ಷಯ ರೋಗ ವಿಭಾಗದಲ್ಲಿ ತೆರೆದು ಹಳೆಯ ಬೋಧಕ ಆಸ್ಪತ್ರೆಯನ್ನು ನೂತನ ಬೋಧಕ ಆಸ್ಪತ್ರೆಗೆ ಸ್ಥಳಾಂತರಿಸಿದ ನಂತರ ಜನರಿಕ್ ಡ್ರಗ್ಸ್ ಮತ್ತು ಆಹಾರ ಮಳಿಗೆಗಳನ್ನು ನೂತನ ಆಸ್ಪತ್ರೆಗೆ ಸ್ಥಳಾಂತರಿಸಲು ಅನುಮತಿಯನ್ನು ನೀಡಲಾಯಿತು.

ಹಾಗು ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಲ ನಿಯಮಿತ, ಬೆಂಗಳೂರು ಇವರು ರಿಮ್ಸ್ ಬೋಧಕ ಆಸ್ಪತ್ರೆಗೆ ಅತಿ ಕಡಿಮೆ ದರದಲ್ಲಿ ರೋಗಿಗಳಿಗೆ ಔಷಧಿಗಳನ್ನು ಕಾಲಕಾಲಕ್ಕೆ ಒದಗಿಸಲು ಮುಂದೆ ಬಂದಿರುವುದರಿಂದ, ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಲ ನಿಯಮಿತ, ಬೆಂಗಳೂರು ಇವರೊಂದಿಗೆ 25 ವರ್ಷಗಳ ಅವಧಿಗೆ Lease Agreement ಮಾಡಿಕೊಂಡಿರುವ ಬಗ್ಗೆ ಆಡಳಿತ ಮಂಡಳಿಯ ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ. 4 : ರಿಮ್ಸ್ ಅವರಣದಲ್ಲಿ ನೂತನವಾಗಿ ನಿರ್ಮಾಣವಾಗಿರುವ 520 ಹಾಸಿಗೆಗಳ ಬೋಧಕ ಆಸ್ಪತ್ರೆಗೆ ಬಯೋಮೆಟ್ರಿಕ್, ಸಿ.ಸಿ. ಕ್ಯಾಮರ, ಇಂಟರ್ ಕಾಮ್, ಟೆಲಿಫೋನ್ ಹಾಗು ಇಂಟರ್‌ನೆಟ್ ಅಳವಡಿಸಲು ಅನುಮತಿ ನೀಡುವ ಕುರಿತು.**

ದಿನಾಂಕ 03.05.2012ರಂದು ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರು ಪ್ರಾಧ್ಯಾಪಕರುಗಳ ಸಭೆಯನ್ನು ಜರುಗಿಸಿ ರಿಮ್ಸ್ ಅವರಣದಲ್ಲಿ ನೂತನವಾಗಿ ನಿರ್ಮಾಣವಾಗಿರುವ 520 ಹಾಸಿಗೆಗಳ ನೂತನ ಬೋದಕ ಆಸ್ಪತ್ರೆಗೆ ಬಯೋಮೆಟ್ರಿಕ್, ಸಿಸಿ ಕ್ಯಾಮರ, ಇಂಟರ್‌ಕಾಂ, ಟೆಲಿಫೋನ್ ಹಾಗು ಇಂಟರ್‌ನೆಟ್‌ನ್ನು ಅಳವಡಿಸುವುದರ ಕುರಿತು ಸಭೆಯಲ್ಲಿ ಪರಿಶೀಲಿಸಿ ಸಿಸಿ ಕ್ಯಾಮರಗಳನ್ನು ಅಗತ್ಯತೆಯ ಅನುಸಾರ ಮನಃ ಪರಿಶೀಲಿಸಿ ಪ್ರಸ್ತಾವನೆಯನ್ನು ಮರು ಸಲ್ಲಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 5 : ದಿನಾಂಕ 15.02.2012ರಂದು ಜರುಗಿದ ರಿಮ್ಸ್ ಸಂಸ್ಥೆಯ 7ನೇ ಆರ್ಥಿಕ ಮಂಡಳಿ ಸಭೆಯ ಸಭಾ ನಡುವಳಿಗಳನ್ನು ಅನುಮೋದಿಸುವ ಕುರಿತು.**

ದಿನಾಂಕ 15.02.2012ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ. 341, ವಿಧಾನ ಸೌಧ, ಬೆಂಗಳೂರಿನಲ್ಲಿ ನೆಡೆದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 7ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಅನುಮೋದಿಸಿತು.

ವಿಷಯ ಸೂಚಿ ಸಂಖ್ಯೆ. 6 : ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗೆ 6ನೇ ವೇತನ ಅಯೋಗವು ನಿಗದಿ ಪಡಿಸಿರುವ ಪರಿಷ್ಕೃತ ವೇತನದ ಹುದ್ದೆಯ ಮೂಲ ವೇತನಕ್ಕೆ ರೂ. 100/-ಗಳನ್ನು ಕಡಿತಗೊಳಿಸಿ ಪಾವತಿಸುವ ಬಗ್ಗೆ.

ಸರ್ಕಾರಿ ಆದೇಶ ಸಂಖ್ಯೆ ನಂ. ಆ.ಇ / 7/ ಎಸ್ಆರ್‌ಪಿ / 2012 ದಿನಾಂಕ 21.04.2012ರನ್ವಯ ಸರ್ಕಾರವು ಬೋಧಕೇತರ ಸಿಬ್ಬಂದಿಗಳಿಗೆ ದಿನಾಂಕ 01.04.2012ರಿಂದ ಅನ್ವಯವಾಗುವಂತೆ ಪರಿಷ್ಕೃತ 6ನೇ ವೇತನವನ್ನು ಜಾರಿ ಮಾಡಿರುವುದರಿಂದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಹುದ್ದೆಯ ಮೂಲ ವೇತನದ ರೂ. 100/-ಗಳ ಕಡಿತದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಸಿಬ್ಬಂದಿಗಳಿಗೆ ದಿನಾಂಕ 01.04.2012ರಿಂದ ಅನ್ವಯವಾಗುವಂತೆ ಪರಿಷ್ಕೃತ ವೇತನದ ಪ್ರಸ್ತಾವನೆಯನ್ನು ಪರಿಶೀಲಿಸಿ ಅವರು ಕಾರ್ಯನಿರ್ವಹಿಸುತ್ತಿರುವ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನದ ಶೇಕಡ 75%ನ್ನು ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳಿಗೆ ದಿನಾಂಕ 01.04.2012ರಿಂದ ಅನ್ವಯವಾಗುವಂತೆ ಪರಿಷ್ಕೃತ ವೇತನವನ್ನು ಪಾವತಿಸಲು ಅನುಮತಿಯನ್ನು ನೀಡಿ ಸರ್ವಾನುಮತದಿಂದ ಅನುಮೋದಿಸಲಾಯಿತು.

ವಿಷಯ ಸೂಚಿ ಸಂಖ್ಯೆ. 7 : ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ Common Bye – Law ರಚನೆ ಮಾಡುವ ಬಗ್ಗೆ

ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳಿಗೆ ಅನುಕೂಲಕರವಾಗುವಂತೆ Common Bye – Lawವನ್ನು ರಚನೆ ಮಾಡಿರುವುದನ್ನು ಆಡಳಿತ ಮಂಡಳಿಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಿತು.

ಹಾಗು ಸಂಸ್ಥೆಯ ಕಾನೂನು ಸಲಹೆಗಾರರೊಂದಿಗೆ ಸದ್ಯದ ಬೈಲಾ ಹಾಗು Common Bye – Lawಗಳ ಕುರಿತು ಏನಾದರೂ ಮಾರ್ಪಡುಗಳಿದ್ದಲ್ಲಿ ಕಾನೂನು ಸಲಹೆಗಾರರೊಂದಿಗೆ ಚರ್ಚಿಸಿ 15 ದಿನಗಳೊಳಗಾಗಿ Common Bye – Lawವನ್ನು Karnataka Society Act ಪ್ರಕಾರ ನೊಂದಣಿ ಮಾಡಿಸಲು ನಿರ್ದೇಶಕರಿಗೆ ಸೂಚಿಸಲಾಯಿತು.

ವಿಷಯ ಸೂಚಿ ಸಂಖ್ಯೆ. 8 : ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು

1) ರಿಮ್ಸ್ ಸಂಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕರರಾಗಿ ಕಾರ್ಯನಿರ್ವಹಿಸುತ್ತಿರುವ ಎಂಎಸ್ಸಿ ಪದವಿದರರಿಗೆ ನೂತನ AICTE ವೇತನ ಶ್ರೇಣಿಯನ್ನು ಪಾವತಿಸುವ ಕುರಿತು.

ರಿಮ್ಸ್ ಸಂಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕರರಾಗಿ ಕಾರ್ಯನಿರ್ವಹಿಸುತ್ತಿರುವ ಎಂಎಸ್ಸಿ ಪದವಿದರರಿಗೆ ನೂತನ AICTE ವೇತನ ಶ್ರೇಣಿಯನ್ನು ಪಾವತಿಸುವ ಬಗ್ಗೆ ಭಾರತೀಯ ವೈದ್ಯಕೀಯ ಮಂಡಳಿ, ನವದೆಹಲಿ ಇವರಿಂದ ಮಾರ್ಗದರ್ಶನ ಪಡೆದು ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ನಿರ್ದೇಶಕರಿಗೆ ಸೂಚಿಸಲಾಯಿತು.

2) ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗು ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಾಹನ 8 ಚಾಲಕರನ್ನು ಹುದ್ದೆಯ ಮೂಲ ವೇತನಕ್ಕೆ ರೂ. 100/-ನ್ನು ಕಡಿತಗೊಳಿಸಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ವೈದ್ಯಕೀಯ ಮಹಾವಿದ್ಯಾಲಯ ಹಾಗು ರಿಮ್ಸ ಬೋಧಕ ಆಸ್ಪತ್ರೆಗೆ ಅಗತ್ಯತೆಯ ಅನುಸಾರ ಹುದ್ದೆಗೆ ಅನ್ವಯವಾಗುವ ಮೂಲ ವೇತನದ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನದ ಶೇಕಡ 75%ನ್ನು ನಿಗದಿಪಡಿಸಿ ನೇಮಕಾತಿ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.

3) **ಭಾರತೀಯ ವೈದ್ಯಕೀಯ ಮಂಡಳಿಯ ಅನುಮೋದನೆಗೆ ಅವಶ್ಯವಿರುವ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿರುವ ಬಗ್ಗೆ.**

ದಿನಾಂಕ 04.08.2009ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿನ 9ನೇ ಆಡಳಿತ ಮಂಡಳಿ ಪ್ರಕಾರ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮಾವಳಿ ಪ್ರಕಾರ ಅವಶ್ಯವಿರುವ ನರ್ಸಿಂಗ್ ಹಾಗು ವಿವಿಧ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಪತ್ರಿಕಾ ಪ್ರಕಟಣೆ ಸಂಖ್ಯೆ. ರಿಮ್ಸ್ / ನೇಮಕಾತಿ / ಸಿ(2)/ 2009-10 ದಿನಾಂಕ 17.09.2009 ಅನ್ವಯ ಹಾಗು 3ನೇ ಸಿಬ್ಬಂದಿ ನೇಮಕಾತಿ ಸಮಿತಿ ಸಭೆಯ ನಡುವಳಿಯಂತೆ ಮಾಡಲಾದ ಬೋಧಕೇತರ ಸಿಬ್ಬಂದಿ ಹುದ್ದೆಗಳ ನೇಮಕಾತಿ ಆಯ್ಕೆ ಪಟ್ಟಿಯನ್ನು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪರಿಶೀಲನೆ ಹಾಗು ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಮಾನ್ಯ ನಿರ್ದೇಶಕರಿಗೆ ಸೂಚಿಸಿ ಅನುಮೋದಿಸಲಾಯಿತು.

4) **300 ಹಾಸಿಗೆಯುಳ್ಳ ರಾಜೀವ್ ಗಾಂಧಿ ಸುಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರನ್ನು ರಿಮ್ಸ್ ಸಂಸ್ಥೆಯ ಅಧೀನಕ್ಕೆ ತೆಗೆದುಕೊಳ್ಳುವ ಬಗ್ಗೆ**

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು 300 ಹಾಸಿಗೆಯುಳ್ಳ ರಾಜೀವ್ ಗಾಂಧಿ ಸುಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರನ್ನು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನಕ್ಕೆ ಹಸ್ತಾಂತರಿಸಲು ಸರ್ಕಾರವು ಆದೇಶ ಹೊರಡಿಸಿರುವುದನ್ನು ಸ್ವಾಗತಿಸಿ ಹರ್ಷ ವ್ಯಕ್ತ ಪಡಿಸಿದರು. ಮತ್ತು ಆಸ್ಪತ್ರೆಯ ಮೂಲ ಭೂತ ಸೌಕರ್ಯಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ಆಸ್ಪತ್ರೆಯಲ್ಲಿ ಯಂತ್ರೋಪಕರಣ, ಉಪಕರಣ ಹಾಗು ಪೀಠೋಪಕರಣ ಇತ್ಯಾದಿಗಳನ್ನು ಸರ್ಕಾರವು ನಿಯೋಜಿಸಿದ ಅಧಿಕಾರಿಗಳ ಸಮಕ್ಷಮದಲ್ಲಿ ರಿಮ್ಸ್ ಸಂಸ್ಥೆಗೆ ಹಸ್ತಾಂತರಿಸಿಕೊಂಡು, ಹಸ್ತಾಂತರಿಸಿಕೊಂಡ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು.

ಸರ್ಕಾರದ ಆದೇಶದ ಪ್ರತಿಯನ್ನು ಪಡೆದುಕೊಂಡ ನಂತರ ಮುಂದಿನ ಒಂದು ವಾರದೊಳಗೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬೇಕಾಗುವ ಬೋಧಕ ಹಾಗು ಬೋಧಕೇತರ ಸಿಬ್ಬಂದಿಯನ್ನು ವಿಭಾಗವಾರು ಗುರುತಿಸಿ ರಿಮ್ಸ್ ಸಂಸ್ಥೆಯಲ್ಲಿ ಲಭ್ಯವಿರುವ ಬೋಧಕ ಸಿಬ್ಬಂದಿಯನ್ನು ಡಿಪಿಸಿ ನಿರ್ವಹಿಸಿ ಪದೋನ್ನತಿ ನೀಡಿ ಉಳಿದ ಸಿಬ್ಬಂದಿಯನ್ನು ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ಹಾಗೂ ಅಗತ್ಯವಿರುವ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. ಮತ್ತು ಸರ್ಕಾರದಿಂದ ಕೂಡಲೇ ಒಂದು ಸಮಿತಿಯನ್ನು ರಚಿಸಿ ಡಾ. ವಸಂತ ಕಾಮತ್, ನಿರ್ದೇಶಕರು ಇವರ ಅಧ್ಯಕ್ಷತೆಯಲ್ಲಿ ಡಾ. ಷಫೀಯಾ ಶೇಕ್, ಅರವಳಿಕೆ ವಿಭಾಗದ ಮುಖ್ಯಸ್ಥರು ಮತ್ತು ಡಾ. ಸುಜಾತ, ರೋಗ ನಿರ್ಧಾರಕ ಶಾಸ್ತ್ರ, ಕಿಮ್ಸ್, ಹುಬ್ಬಳ್ಳಿ ಇವರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಯಿತು ಮತ್ತು ಓಪೆಕ್ ಆಸ್ಪತ್ರೆಯಲ್ಲಿನ ಯಂತ್ರೋಪಕರಣ, ಉಪಕರಣ ಹಾಗು ಪೀಠೋಪಕರಣ ಮತ್ತು ಇತರ ಸಲಕರಣೆಗಳನ್ನು ಸ್ಟಾಕ್ ತೆಗೆದುಕೊಂಡು ಪರಿಶೀಲಿಸಿ ಓಪೆಕ್ ಆಸ್ಪತ್ರೆಯನ್ನು ಅಪೋಲೋ ಅಧಿಕಾರಿಗಳಿಂದ ರಿಮ್ಸ್ ಸಂಸ್ಥೆಗೆ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು.

5) **ಭಾರತೀಯ ವೈದ್ಯಕೀಯ ಮಂಡಳಿಯ ಅನುಮೋದನೆಗೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಸಿಟಿ ಸ್ಕ್ಯಾನ್ ಮತ್ತು ಅಲ್ಟ್ರಾ ಸೌಂಡ್ ಉಪಕರಣ, ಮೆಡಿಕಲ್ ಗ್ಯಾಸ್ ಪೈಪ್ ಲೈನ್ ಖರೀದಿಸಿ ಅಳವಡಿಸಲು ಅನುಮತಿ ನೀಡುವ ಬಗ್ಗೆ.**

ಭಾರತೀಯ ವೈದ್ಯಕೀಯ ಮಂಡಳಿಯು ಮಾನ್ಯತೆ ನೀಡಿ ವಿಧಿಸಿರುವ ಷರತ್ತಿನೊಂದಿಗೆ ಮೇಲಿನ ಉಕರಣಗಳ ಕೊರತೆ ಇರುವುದನ್ನು ಗಮನಿಸಿ ಸಂಸ್ಥೆಗೆ ಬಿಡುಗಡೆಯಾಗುವ ಅನುದಾನದಲ್ಲಿ ಆದ್ಯತೆಯ ಮೇಲೆ ಮೇಲಿನ ಉಪಕರಣಗಳನ್ನು ನಿಯಮಾನುಸಾರ ಖರೀದಿಸಿ ಅಳವಡಿಸಲು ಅನುಮತಿ ನೀಡಿ ಅನುಮೋದಿಸಲಾಯಿತು.

ವಂದನೆಗಳೊಂದಿಗೆ ಆಡಳಿತ ಮಂಡಳಿ ಸಭೆಯು ಮುಕ್ತಾಯವಾಯಿತು.

(ಕೆ.ಹೆಚ್. ಗೋಪಾಲಕೃಷ್ಣ ಗೌಡ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.

**ಕೆ.ಹೆಚ್. ಗೋಪಾಲಕೃಷ್ಣ ಗೌಡ,**
**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**
**(ವೈದ್ಯಕೀಯ ಶಿಕ್ಷಣ)**

(ಎಸ್.ಎ. ರಾಮದಾಸ್)
ವೈದ್ಯಕೀಯ ಶಿಕ್ಷಣ ಸಚಿವರು

(ಎಸ್.ಎ. ರಾಮದಾಸ್),
ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ,
ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.